ದಿನಾಂಕ 05-08-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 7ನೇ ಪ್ರತಿವಾದಿ ಪರ ಶ್ರೀ ಪಿ.ಕೆ., ವಕೀಲರಿಂದಃ-

ಶ್ರೀ ಪಿ.ಕೆ., ವಕೀಲರು 6ನೇ ಪ್ರತಿವಾದಿ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಅನುಮತಿ ಕೋರಿರುತ್ತಾರೆ, ನೀಡಲಾಯಿತು.

ನನ್ನ ಮದುವೆಯಾದದ್ದು 1996ರಲ್ಲಿ. ಮದುವೆಯ ದಿನಾಂಕ 02.02.1996. 3ನೇ ಪ್ರತಿವಾದಿ ಮದುವೆಯಾಗಿದ್ದಾರೆ. 3ನೇ ಪ್ರತಿವಾದಿಯ ಮದುವೆಗೆ ನಾನು ಹೋಗಿರಲಿಲ್ಲ. ಆ ಕಾಲಕ್ಕೆ ನಾನು ನನ್ನ ತಂದೆ ತಾಯಿಯ ಜೊತೆ ಮಾತನಾಡುತ್ತಿರಲಿಲ್ಲ, ದೂರ ಇದ್ದೆ. ನಿಮ್ಮ ತಾತ ಮತ್ತು ಅಜ್ಜಿ ತೀರಿಕೊಂಡು ಎಷ್ಟು ವರ್ಷಗಳಾಗಿವೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾತ ತೀರಿಕೊಳ್ಳುವ ಕಾಲಕ್ಕೆ ವಯಸ್ಸಾಗಿತ್ತು, ಆರೋಗ್ಯ ಸರಿಯಿರಲಿಲ್ಲ ಎಂದರೆ ಸಾಕ್ಷಿಯು ಚೆನ್ನಾಗಿಯೇ ಇದ್ದರು ಎಂದು ನುಡಿಯುತ್ತಾರೆ. ನನ್ನ ಅಜ್ಜಿ ತೀರಿಕೊಂಡು 15 ವರ್ಷಗಳಾಗಿರಬಹುದು. ನನ್ನ ಅಜ್ಜಿ ವಯೋಸಹಜ ಖಾಯಿಲೆಯಿಂದ ತೀರಿಕೊಂಡರು ಎಂದರೆ ಸರಿ. ನನ್ನ ತಾತನಿಗೆ ವಯಸ್ಸಾಗಿದ್ದರಿಂದ ಅವರು ಅವರ ನಾಲ್ಕು ಜನ ಗಂಡು ಮಕ್ಕಳಿಗೆ ಜಮೀನುಗಳನ್ನು ಪ್ರತ್ಯೇಕವಾಗಿ ಕೊಟ್ಟಿದ್ದು, ಜಮೀನುಗಳನ್ನು ಗಂಡು ಮಕ್ಕಳು ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ.

2. ದಾವಾ ಸ್ವತ್ತುಗಳ ಸರ್ವೆ ನಂಬರ್ ಗೊತ್ತಾಗುವುದಿಲ್ಲ. ದಾವಾ ಸ್ವತ್ತುಗಳ ಮೂಲತಃ ನನ್ನ ತಾತ, ಅಜ್ಜಿಯ ಸ್ವತ್ತುಗಳು. ದಾವಾ ಸ್ವತ್ತುಗಳು ನನ್ನ ತಾತನ ಹೆಸರಿನಲ್ಲಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ದಾವಾ ಸ್ವತ್ತುಗಳಲ್ಲಿ ಯಾವ ಯಾವ ಸ್ವತ್ತುಗಳು ನಿಮ್ಮ ತಾತನಿಗೆ ಸೇರಿದ್ದು, ಯಾವ ಸ್ವತ್ತುಗಳು ನಿಮ್ಮ ಅಜ್ಜಿಗೆ ಸೇರಿದ ಸ್ವತ್ತುಗಳು ಎಂದರೆ ಸಾಕ್ಷಿಯು ಸರ್ವೆ ನಂಬರ್

ಹೇಳಲಿಕ್ಕಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾತನ ಹೆಸರಿನಲ್ಲಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಿಪಿ-1 ರಿಂದ ನಿಪಿ-27 ದಾಖಲೆಗಳನ್ನು ನೋಡಿ, ಸರ್ವೆ ನಂ.319 ನನ್ನ ಅಜ್ಜಿ ಮತ್ತು ನನ್ನ ತಾತನ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.

3. ದಾವಾ ಸ್ವತ್ತುಗಳಲ್ಲಿ ನಿಮ್ಮ ತಂದೆ ಖರೀದಿ ಮಾಡಿರುವ ಸ್ವತ್ತುಗಳು ಯಾವುದು ಎಂದರೆ ಸಾಕ್ಷಿಯು 13 ಗುಂಟೆ ಮತ್ತು 35 ಗುಂಟೆ ಎಂದು ನುಡಿಯುತ್ತಾರೆ. ಮುಂದುವರೆದು 35 ಗುಂಟೆಯನ್ನು ದಾನ ಎಂದು ಬರೆಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ವಾದಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-4ರಲ್ಲಿ ಸರ್ವೆ ನಂ.13ನ್ನು ನಿಮ್ಮ ತಂದೆ 1985-86ರಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ಆದರೆ ದಾಖಲೆಯಲ್ಲಿ ಆ ರೀತಿ ಇದೆ ಎಂದು ನುಡಿಯುತ್ತಾರೆ. ನಿಪಿ-15ರ ಪ್ರಕಾರ ಸರ್ವೆ ನಂ.131/1ಬಿ 1985-86ರಲ್ಲಿ ಕ್ರಯ ಎಂದು ಇದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಹೌದು ಎಂದು ನುಡಿಯುತ್ತಾರೆ. ಆ ಎರಡೂ ಜಮೀನುಗಳನ್ನು ನನ್ನ ತಂದೆ ಖರೀದಿ ಮಾಡುವ ಕಾಲಕ್ಕೆ ನನ್ನ ಅಜ್ಜಿ, ತಾತ ಬದುಕಿದ್ದರು ಎಂದರೆ ಸರಿ. 1985-86ರಲ್ಲಿ ನನ್ನ ತಾತ, ಅಜ್ಜಿ ಚೆನ್ನಾಗಿದ್ದು, ವ್ಯವಸಾಯ ಮಾಡಿಕೊಂಡಿದ್ದರು ಎಂದರೆ ಸರಿ.

4. 1985-86ರಲ್ಲಿ ನಿಮ್ಮ ತಂದೆಯ ಹೆಸರಿನಲ್ಲಿ ಪ್ರತ್ಯೇಕವಾಗಿ ಜಮೀನುಗಳನ್ನು ತೆಗೆದುಕೊಂಡಿರಲು ಕಾರಣ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. 1985-86ರ ಮುಂಚೆಯೇ ನನ್ನ ತಂದೆ ವಿಭಾಗ ಮಾಡಿಕೊಂಡಿದ್ದರಿಂದ ಆ ಎರಡೂ ಜಮೀನುಗಳನ್ನು ಪ್ರತ್ಯೇಕವಾಗಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 1985-86ರಲ್ಲೇ ನಿಮ್ಮ ತಂದೆ ವಿಭಾಗ ಮಾಡಿಕೊಂಡಿಲ್ಲದಿದ್ದಲ್ಲಿ ಆಸ್ತಿಗಳನ್ನು ನಿಮ್ಮ ಅಜ್ಜಿ, ತಾತನ ಹೆಸರಿನಲ್ಲಿ ಕೊಂಡುಕೊಳ್ಳುತಿದ್ದರು ಎಂದರೆ ಸಾಕ್ಷಿಯು ಸುಳ್ಳು, ವಿಭಾಗವೇ ಆಗಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಮತ್ತು ಚಿಕ್ಕಪ್ಪನ ನಡುವೆ

ವಿಭಾಗ ಆಗಿದ್ದು ವಿಭಾಗದಲ್ಲಿ ನಿಮ್ಮ ತಂದೆಗೆ ಸರ್ವೇ ನಂ.390/4ರಲ್ಲಿ 4 ಎಕರೆ ಎರಡೂವರೆ ಗುಂಟೆ ಪೈಕಿ 1 ಎಕರೆ ಎರಡೂವರೆ ಗುಂಟೆ ಬಂದಿತ್ತು ಎಂದರೆ ಸಾಕ್ಷಿಯು ವಿಭಾಗವೇ ಆಗಿಲ್ಲ ಎಂದು ನುಡಿಯುತ್ತಾರೆ.

5. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಇದರಲ್ಲಿರುವ ಸಹಿ ನಿಮ್ಮ ತಂದೆಯ ಸಹಿ, ಇದು ನಿಮ್ಮ ತಂದೆ ಬರೆದುಕೊಟ್ಟಿರುವ ಕ್ರಯಪತ್ರ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಈ ದಾಖಲೆ ಪ್ರಕಾರ ನಿಮ್ಮ ತಂದೆ ನಿಮ್ಮ ಚಿಕ್ಕಪ್ಪನಿಗೆ ದಿನಾಂಕ 01.02.2002ರಲ್ಲಿ 1 ಎಕರೆ ಎರಡೂವರೆ ಗುಂಟೆಯನ್ನು ಕ್ರಯಕ್ಕೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿಗೆ ಮತ್ತೆ ತೋರಿಸಿ ಆ ದಾಖಲೆಯಲ್ಲಿ ದಿನಾಂಕ 25.01.2000ರಂದು ಬರೆಸಿಕೊಟ್ಟ ಪಂಚಾಯಿತಿ ಪಾರಿಕತ್‌ಗೆ ಸೇರಿಸಿಕೊಟ್ಟಿರುತ್ತೇವೆ ಎಂದು ಬರೆದಿದೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ಚಿಕ್ಕಪ್ಪ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ ನಮ್ಮ ಚಿಕ್ಕಪ್ಪ ಆ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಆ ದಾಖಲೆ ಏತಕ್ಕೆ ಆಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ದಾಖಲೆಯೇ ಆಗಿಲ್ಲ ಎಂದು ನುಡಿಯುತ್ತಾರೆ.

6. ನನ್ನ ಮದುವೆಗೆ ನನ್ನ ತಂದೆ ನನ್ನ ಅಜ್ಜಿಯ ತಮ್ಮನಿಂದ ಹಣವನ್ನು ಸಾಲ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. 85,000/- ರೂಗಳನ್ನು ನನ್ನ ಮದುವೆಯ ಖರ್ಚಿಗೆ ಕೊಡುವುದು, ನನ್ನ ತಂದೆ ಕ್ರಯಪತ್ರ ಬರೆದುಕೊಡುವುದು ಎಂದು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಸುಂದರಣ್ಣರವರ ಮಗಳನ್ನು ನನ್ನ ಚಿಕ್ಕಪ್ಪನಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ಮದುವೆಯ ಕಾಲಕ್ಕೆ ಒಂದು ಜಮೀನನ್ನು ವರದಕ್ಷಿಣೆಯಾಗಿ ಕೊಡಬೇಕೆಂದು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ.

ಅದಕ್ಕೆ ಬದಲಾಗಿ ನನ್ನ ತಂದೆ ಅವರ ತಮ್ಮನಿಗೆ ಕ್ರಯ ಮಾಡಿಕೊಟ್ಟರು ಎಂದರೆ ಸರಿಯಲ್ಲ. ಆ ಸಂಬಂಧವಾಗಿ ಬರೆದುಕೊಟ್ಟ ದಾಖಲೆಯೇ ಈಗ ತೋರಿಸಿದ ದಾಖಲೆ ಎಂದರೆ ಸರಿಯಲ್ಲ.

7. ಸರ್ವೆ ನಂ.319ರಲ್ಲಿ 7ನೇ ಪ್ರತಿವಾದಿಗೆ ಒಂದು ಎಕರೆ ಭಾಗ ಹೋಗಿದೆ ಎಂದರೆ ಸಾಕ್ಷಿಯು ಭಾಗವೇ ಆಗಿಲ್ಲ ಎಂದು ನುಡಿಯುತ್ತಾರೆ. ಒಂದು ಎಕರೆ ಮಂಜುನಾಥ್‌ರವರಿಗೆ ಹೋಗಿದೆ ಎಂದರೆ ಸಾಕ್ಷಿಯು ಭಾಗವೇ ಆಗಿಲ್ಲ ಎಂದು ನುಡಿಯುತ್ತಾರೆ. ಉಳಿಕೆ ಒಂದು ಎಕರೆ ಆಂಜನಪ್ಪರವರಿಗೆ ಹೋಗಿದೆ ಎಂದರೆ ಸಾಕ್ಷಿಯು ಭಾಗವೇ ಆಗಿಲ್ಲ ಎಂದು ನುಡಿಯುತ್ತಾರೆ. ಪರಸ್ಪರ ಸಮ್ಮತಿಯ ಮೇರೆಗೆ ಒಟ್ಟು ಮೂರು ಎಕರೆಯನ್ನು ಮಲ್ಲೇಶ್‌ರವರು ಇಟ್ಟುಕೊಂಡರು ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ನಿಮ್ಮ ಅಜ್ಜಿ, ನಿಮ್ಮ ತಮ್ಮ, ತಂಗಿ ಮತ್ತು ಚಿಕ್ಕಪ್ಪ ಸೇರಿ ಮಲ್ಲೇಶ್‌ರವರಿಗೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ದಾನಪತ್ರದ ಪ್ರಕಾರ ಮೂರು ಎಕರೆಯಲ್ಲಿ ಮಲ್ಲೇಶ್‌ರವರೇ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 7ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು 250/- ರೂಗಳ ವೆಚ್ಚದ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.